**ಅಸಲು ದಾವಾ ಸಂಖ್ಯೆಃ 245/2019**

**ಪಿ.ಡಬ್ಲೂ -1**

ದಿಃ 19-11-2022 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು ಶ್ರೀಮತಿ ವಿ ಆರ್ ಬಿ ರವರಿಂದಃ-**

ಈ ದಾವೆಯನ್ನು ಏನು ಕೋರಿ ಸಲ್ಲಿರುತ್ತೀರಿ ಎಂದರೆ ನಮ್ಮ ಜಾಗವೂ ನಮ್ಮ ಕಬ್ಜೆಯಲ್ಲಿ ಇರುತ್ತದೆ ಎಂದು ಕೋರಿರುತ್ತೇವೆ. ಈ ದಾವೆಯನ್ನು ಸಲ್ಲಿಸಲು ನಮ್ಮ ವಕೀಲರಿಗೆ ನಾನೇ ಸ್ವತಃ ಮಾಹಿತಿಯನ್ನು ನೀಡಿರುತ್ತೇನೆ ಎಂದರೆ ಸರಿ . ನಾನು ಮಾಹಿತಿಯನ್ನು ನೀಡಲು ಒಬ್ಬನೇ ಹೋಗಿರುತ್ತೇನೆ. ಈ ದಾವೆಯಲ್ಲಿ ಹಳೆಯ ಕೇಸುಗಳ ಬಗ್ಗೆ ನಮೂದನೆ ಮಾಡಿರುತ್ತೇನೆ. ನಿತಿನ ಚೌಗಲೆ ರವರ ಕೇಸನ್ನು ನಮೂದಿಸಿರುತ್ತೇನೆ. ಅದರ ಸಂಖ್ಯೆ ನನಗೆ ಸರಿಯಾಗಿ ಗೊತ್ತಿಲ್ಲ. ಸದ್ರಿ ಕೇಸಿನಲ್ಲಿ ಏನು ಆದೇಶ ಆಗಿರುತ್ತದೆ ಎಂದು ನಾನು ಕಾಗದ ಪತ್ರಗಳನ್ನು ನೋಡಿರುವುದಿಲ್ಲ . ಚೌಗಲೆರವರ ಕೇಸಿನಲ್ಲಿ ಯಾರು ಪಕ್ಷಗಾರರು ಇದ್ದರು ಎಂದು ನಾನು ಹೇಳಬಹುದು. ಸದ್ರಿ ಕೇಸಿನಲ್ಲಿ ಬಸವಂತ ಪೂಜೇರಿ, ಡಿ ವಾಯ ಪಾಟೀಲ University ಮತ್ತು ನಿತಿನ ಚೌಗಲೆ ಇದ್ದರು. ಸದ್ರಿ ಕೇಸನ್ನು 2 ನೇ ಪ್ರತಿವಾದಿಯು 1 ಮತ್ತು 3 ನೇ ಪ್ರತಿವಾದಿಯರ ವಿರುದ್ದ ಸಲ್ಲಿಸಿರುತ್ತಾರೆ. ಸದ್ರಿ ಕೇಸಿನಲ್ಲಿ ನಾನು ಪಕ್ಷಗಾರನಾಗಿರಲಿಲ್ಲ . ಸದ್ರಿ ಕೇಸಿನಲ್ಲಿ ಯಾರ ಸಾಕ್ಷಿ ವಿಚಾರಣೆ ಆಗಿರುತ್ತದೆ ಎಂದು ನನಗೆ ಗೊತ್ತಿಲ್ಲ. ಈ ಕೇಸಿನಲ್ಲಿ ಏನು ಪ್ರಾರ್ಥನೆ ಕೋರಿರುತ್ತೇನೆ ಎಂದು ನನಗೆ ಗೊತ್ತಿಲ್ಲ.

ಸದ್ರಿ ಕೇಸಿನಲ್ಲಿ ಲತೀಫಖಾನ ಪಠಾಣರವರ ಸಾಕ್ಷಿ ವಿಚಾರಣೆ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಲತೀಫಖಾನ ಪಠಾಣರವರ ನನಗೆ ಗೊತ್ತಿಲ್ಲ. ಲತೀಫಖಾನ ಪಠಾಣರವರಿಗೂ ಈ ದಾವಾ ಆಸ್ತಿಗೂ ಸಂಬಂಧ ಇರುವ ಬಗ್ಗೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯು ಸದ್ರಿ ಕೇಸನ್ನು ಯಾವ ಕಾರಣಕ್ಕೆ ಸಲ್ಲಿಸಿರುತ್ತಾರೆ ನನಗೆ ಗೊತ್ತಿಲ್ಲ . 2 ನೇ ಪ್ರತಿವಾದಿಯು 1 ನೇ ಪ್ರತಿವಾದಿ ಮತ್ತು ಆತನ ಮಕ್ಕಳು ಸೇರಿ ಕ್ರಯದ ಕರಾರನ್ನು ಮಾಡಿದ ಬಗ್ಗೆ ನನಗೆ ಮಾಹಿತಿ ಇಲ್ಲ. ದಿನಾಂಕಃ 12-04-1997 ರಲ್ಲಿ ಆದ ಕ್ರಯ ಕರಾರಿನ ಬಗ್ಗೆ ಸದ್ರಿ ದಾವೆಯನ್ನು ಸಲ್ಲಿಸಲಾಗಿದೆ ಎನ್ನುವ ವಿಚಾರ ನನಗೆ ಗೊತ್ತಿಲ್ಲ. ಸದ್ರಿ ಕ್ರಯದ ಕರಾರನ್ನು ನಾನು ನೋಡಿರುವುದಿಲ್ಲ. ಸದ್ರಿ ಕ್ರಯದ ಕರಾರಿಗೆ ಅಶೋಕ ಭರಮಾ ಮೇಲಗೆ ಮತ್ತು ಕೃಷ್ಣಾ ಅನಗೋಳಕರವರು ಸಾಕ್ಷಿದಾರರು ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಸದ್ರಿ ಕ್ರಯ ಕರಾರಿನ ಪ್ರಕಾರ 1 ನೇ ಪ್ರತಿವಾದಿ ಮತ್ತು ಆತನ ಮಕ್ಕಳು ದಾವಾ ಆಸ್ತಿಯ ಕಬ್ಜೆಯನ್ನು ನೀಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯು ಸಲ್ಲಿಸಿದ ದಾವೆಯಲ್ಲಿ ಡಿಕ್ರಿ ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. 2 ನೇ ಪ್ರತಿವಾದಿಯು ಸಲ್ಲಿಸಿದ ದಾವೆಯ ಡಿಕ್ರಿಯ ಪ್ರಕಾರ ಮತ್ತು ಕ್ರಯದ

ಕರಾರಿನ ಪ್ರಕಾರ 2 ನೇ ಪ್ರತಿವಾದಿಯ ಕಬ್ಜೆಯಲ್ಲಿ ಸದ್ರಿ ಕೇಸಿನ ದಾವಾ ಆಸ್ತಿಯು ಇದೆ ಎಂದರೆ ಸರಿಯಲ್ಲ. ನಾನು ಸದ್ರಿ ತೀರ್ಪು ಮತ್ತು ಡಿಕ್ರಿಯನ್ನು ನೋಡಿರುವುದಿಲ್ಲ . 2 ನೇ ಪ್ರತಿವಾದಿಯು ಸಲ್ಲಿಸಿದ ದಾವೆಯ ತೀರ್ಪಿನ ಬಗ್ಗೆ ಈ ದಾವೆಯಲ್ಲಿ ಎನೂ ಕೋರಿರುತ್ತೀರಿ ಎಂದರೆ ಸದ್ರಿ ತೀರ್ಪು ಮತ್ತು ಡಿಕ್ರಿ ನನಗೆ ಬಂದನಕಾರಿ ಅಲ್ಲ ಎಂದು ಕೇಳಿರುತ್ತೇನೆ . 2 ನೇ ಪ್ರತಿವಾದಿಯು ಸಲ್ಲಿಸಿದ ದಾವಾ ಆಸ್ತಿಯು ಟ್ರಿಬುನಲ ಮೂಲಕ 1 ನೇ ಪ್ರತಿವಾದಿಗೆ ಬಂದ ಆಸ್ತಿ ಎಂದರೆ ಸರಿ. ಸದ್ರಿ ಆಸ್ತಿಯನ್ನು 15 ವರ್ಷಗಳ ಕಾಲ ಪರಾಭಾರಿ ಮಾಡಬಾರದೆಂದು ನಿರ್ಬಂದನೆ ಇದೆ ಎಂದರೆ ಸರಿ. ಟ್ರಿಬುನಲ ಆದೇಶದಂತೆ ನಮ್ಮ ಮನೆತನಕ್ಕೆ ಈ ದಾವಾ ಆಸ್ತಿ ಮತ್ತು 2 ನೇ ಪ್ರತಿವಾದಿಯು ಸಲ್ಲಿಸಿದ ದಾವಾ ಅಸ್ತಿಯನ್ನು ಹೊರತು ಪಡೆಸಿ ಬೇರೆ ಆಸ್ತಿಯು ಸಹ ಆದೇಶವಾಗಿರುತ್ತದೆ ಎಂದರೆ ಸರಿ. ಟ್ರಿಬುನಲನಿಂದ ಆದ ಆದೇಶವು 1 ನೇ ಪ್ರತಿವಾದಿಗೆ ಆದ ಆದೇಶವಾಗಿರುತ್ತದೆ ಎಂದರೆ ಸರಿ.

3 ನೇ ಪ್ರತಿವಾದಿರವರ ಖರೀದಿ ಪತ್ರವನ್ನು ಯಾರ ಯಾರಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದ್ರಿ ಖರೀದಿ ಪತ್ರವನ್ನು ನೋಡಿರುತ್ತೇನೆ ಆದರೆ ಅದರ ಬಗ್ಗೆ ನನಗೆ ಹೆಚ್ಚಿಗೆ ಗೊತ್ತಿಲ್ಲ. ಸದ್ರಿ ಖರೀದಿ ಪತ್ರವನ್ನು ನಾನು ಹಾಜರು ಪಡೆಸಿರುತ್ತೇನೆ . ಒ ಎಸ 167/2007 ರ ಕಾಗದ ಪತ್ರಗಳನ್ನು ಈ ದಾವೆಯಲ್ಲಿ ಹಾಜರು ಪಡೆಸಿರುತ್ತೇನೆ. ಒ ಎಸ್ ನಂಬರ 167/2007 ರ ಕಾಗದ ಪತ್ರಗಳ ಪ್ರತಿಯನ್ನು ನಾನೇ ಖುದ್ದಾಗಿ ಪಡೆದಿರುತ್ತೇನೆ. ಸದ್ರಿ ದಾವೆಯಲ್ಲಿ ಈ ಕೇಸಿನ 3 ನೇ ಪ್ರತಿವಾದಿಯು 4 ನೇ ಪ್ರತಿವಾದಿ ಆಗಿ ಇರುತ್ತಾರೆ ಎಂದರೆ ಸರಿ. ಒ ಎಸ ನಂಬರ 167/2007 ರ ತೀರ್ಪಿನಲ್ಲಿ ಈ ಕೇಸಿನ 3 ನೇ ಪ್ರತಿವಾದಿಯ ಹೆಸರನ್ನು ನೋಡಿದ್ದಿರಾ ಎಂದರೆ ಹೆಸರನ್ನು ನೋಡಿದ್ದೇನೆ ವಿಳಾಸ ನೋಡಿಲ್ಲ ಎಂದು ನುಡಿಯುತ್ತಾರೆ. ನಿಪಿ-7 ಕ್ಕೆ 3 ನೇ ಪ್ರತಿವಾದಿ ಪರ ಯಾರ ಸಹಿ ಮಾಡಿರುತ್ತಾರೆ ಎಂದರೆ ಫರನಾಂಡಿಸ ರವರು ಸಹಿ ಮಾಡಿರುತ್ತಾರೆ. ನನಗೆ ಸದ್ರಿ ಫರನಾಂಡಿಸರವರು ಗೊತ್ತಿಲ್ಲ ಮತ್ತು ನಾನು ಅವರನ್ನು ನೋಡಿಲ್ಲ. ಒ ಎಸ ನಂಬರ 167/2007 ರಲ್ಲಿ ಎನೂ ಆದೇಶವಾಗಿದೆ ಎಂದು ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯ ಖರೀದಿ ಪತ್ರವನ್ನು ಯಾವ ದಿನಾಂಕದಂದು ಮಾಡಾಗಿದೆ ಎಂದು ನನಗೆ ಗೊತ್ತಿಲ್ಲ.

ಮುಂದುರೆದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದು ಮುಂದೂಡಲಾಯಿತು.

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಧೀಶರು,**
**ಬೆಳಗಾವಿ.**